# 8

# ದಾವೀದನ ಮಗನು/ಅಬ್ರಹಾಮನ ಮಗನು

## (ಮತ್ತಾಯ 1)

ಯೇಸುವಿನ ಕಥೆಯನ್ನು ಹೇಳಲು, ನೀವುಗಳು ಒಂದು ಹೊಸ ಒಡಂಬಡಿಕೆಯನ್ನು ಬರೆಯಬೇಕೆಂದು ದೇವರು ಹೇಳುವದಾದರೆ, ನೀವು ಯಾವ ರೀತಿ ಆರಂಭಿಸುವಿರಿ? ಪ್ರಾಯಶಃ ಮತ್ತಾಯನು ಆರಂಭಿಸಿದ ಹಾಗೆ ಮಾಡಲಾರಿರಿ, ಯಾಕಂದರೆ ಅವನು ವಂಶಾವಳಿಯ ಕುರಿತು ಹದಿನೇಳು ವಚನಗಳನ್ನು (ಪೂರ್ವಿಕರ ಪಟ್ಟಿ) ಬಳಸಿರುವನು, ಅದರಲ್ಲಿ ನಾಲ್ವತ್ತ - ಎರಡು ತಲೆಮಾರುಗಳಿವೆ. ಮತ್ತಾಯ 1:1-17 ವಚನಗಳನ್ನು ಹೆಚ್ಚು ಜನರು ಓದಿರುವದಿಲ್ಲ. ಅನೇಕರಾದ ನಾವುಗಳು 18ನೇ ವಚನದಿಂದ ಸಾಮಾನ್ಯ ವಾಗಿ ಓದುವದನ್ನು ಆರಂಭಿಸುತ್ತೇವೆ ಮತ್ತು ಮೇಲಿನ ಹದಿನೇಳು ವಚನಗಳು ಇಲ್ಲ ಎಂಬುದಾಗಿ ವರ್ತಿಸುತ್ತೇವೆ.

ಸತ್ಯವೇದವನ್ನು ಸಂಪೂರ್ಣವಾದ ಹಿನ್ನಲೆಯಿಂದ ಗಮನಿಸುವದಾದರೆ, ಮತ್ತಾಯ 1ನ್ನು ಹೊಸ ಒಡಂಬಡಿಕೆಯ ಆರಂಭದಲ್ಲಿ ಬರೆದಿರುವದು ಯೋಗ್ಯವಾಗಿದೆ. ಮತ್ತಾಯನ ಪುಸ್ತಕವನ್ನು ಪ್ರಥಮವಾಗಿ ಬರೆದಿರುವದರಿಂದ, ಅದು ಹೊಸ ಒಡಂಬಡಿಕೆಯ ಪ್ರಥಮ ಪುಸ್ತಕವಲ್ಲ. ಪ್ರಾಯಶಃ ಪೌಲನ ಪತ್ರಿಕೆಗಳು, ಮತ್ತಾಯನ ಬರವಣಿಗೆಗಿಂತ ಮೊದಲೆ ಬರೆಯಲ್ಪಟ್ಟಿರಬಹುದು. ನಮ್ಮ ಹೊಸ ಒಡಂಬಡಿಕೆಯನ್ನು ಕಾಲಾನುಕ್ರಮವಾಗಿ ಯೋಜಿಸಿರುವದಿಲ್ಲ; ಅದನ್ನು ತರ್ಕಶಾಸ್ತ್ರದ ಪ್ರಕಾರ ಹೊಂದಿಸಲಾಗಿದೆ. ಮೊದಲ ನಾಲ್ಕು ಸುವಾರ್ತೆಗಳಲ್ಲಿ, ಯೇಸುವಿನ ಇತಿಹಾಸವಿದೆ. ನಂತರದಲ್ಲಿ ಯೇಸುವಿನಿಂದಾದ ಕ್ರಾಂತಿಯ ಕುರಿತ ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಹೊಂದಿಸಲಾಗಿದೆ, ನಂತರದಲ್ಲಿ ಸಭೆಯ ಕುರಿತಾಗಿರುವ ವಿಚಾರವನ್ನು ಸಭೆಗೂ ಹಾಗೂ ವ್ಯಕ್ತಿಗಳಿಗೂ ತಿಳಿಸಲ್ಪಡುವ ಪತ್ರಿಕೆಗಳನ್ನು ಹೊಂದಿಸಲಾಗಿದೆ. ಅಂತಿಮವಾಗಿ ಮಹಿಮೆಹೊಂದಿದ, ದೇವರ ಕುರಿಮರಿಯಾದ ಯೇಸುವಿನ ಕುರಿತಾಗಿ ಮಹತ್ವದ ಅಂಶವನ್ನು ಅಡಕಗೊಂಡಿರುವ ಪ್ರಕಟನೆಯನ್ನು ಹೊಂದಿಸಲಾಗಿದೆ.

ಹೊಸ ಒಡಂಬಡಿಕೆಯ ವಂಶಾವಳಿಗಳಿಂದ ಏಕೆ ಆರಂಭಗೊಂಡಿದೆ? ಏಕೆಂದರೆ ಅದು ಹೊಸ ಒಡಂಬಡಿಕೆಗೂ ಹಾಗೂ ಹಳೆ ಒಡಂಬಡಿಕೆಗೂ ನಡುವೆ ಒಂದು ಸೇತುವೆ ಯನ್ನು ನಿರ್ಮಾಣ ಮಾಡುತ್ತದೆ. ಮತ್ತಾಯ ಸುವಾರ್ತೆಯನ್ನು ಪ್ರಥಮವಾಗಿ ಓದಿದ (ಯೆಹೂದ್ಯರು) ಜನರು ಈ ವಂಶಾವಳಿಯು ಕೇವಲ ಒಂದು ಹೆಸರುಗಳುಳ್ಳ ಪಟ್ಟಿಯಾಗಿರದೆ, ಥಾಮಸ್‌ರಾಯವರು ತಿಳಿಸಿದ ಹಾಗೆ, ಅದು ಕಥೆಗಳುಳ್ಳ ಒಂದು ಕವನವಾಗಿದೆ, "ಪ್ರತಿ ಹೆಸರು ಸಹ ಉಕ್ಕಿ ಹರಿಯುವ ನೆನಪುಗಳನ್ನು ಹೊಂದಿರುತ್ತದೆ."[1] ಇಬ್ರಿಯ ಬರವಣಿಗೆಯನ್ನು ಓದುತ್ತಿದ್ದವರಿಗೆ "ಅಬ್ರಹಾಮ," "ಭೋವಜ್," "ಉಜ್ಜೀಯ," "ಜೆರುಬಾಬೆಲ್" ಮತ್ತು ಉಳಿದ ಹೆಸರುಗಳು, ಹಳೇ ಒಡಂಬಡಿಕೆಯ ಕಥೆಗಳನ್ನು ನೆನಪು ಮಾಡುತ್ತದೆ. "ಈ ಕುಟುಂಬದ ಮರವು" ಕುಟುಂಬದ ಕಥೆ ಒಂದು "ಅಲ್ಬಂ" ಎಂದು ಹೇಳಬಹುದು - ಈ ಕುಟಂಬಗಳ ಕಥೆಗಳಿಂದ ಯೇಸುವನ್ನು ವಿವರಿಸಿ, ಆತನಲ್ಲಿ ಎಲ್ಲವುಗಳು ನೆರವೇರಿದವು ಎಂದು ತಿಳಿಯಬಹುದು.

ಮತ್ತಾಯ 1ರಲ್ಲಿ ವಂಶಾವಳಿಗಿಂತಲೂ, ಹೆಚ್ಚಿನದನ್ನು ಕಾಣುತ್ತೇವೆ. ವಚನಗಳು 18 ರಿಂದ 25ರಲ್ಲಿ ವಂಶಾವಳಿಗಳ ಸಂಗಡ ಯೇಸುವಿನ ಜನನವನ್ನು ತಿಳಿಸಲಾಗಿದೆ (ಈ ಕುರಿತ ಎರಡು ಬಾರಿ ಲೂಕ 2) ವಂಶಾವಳಿ ಹಾಗೂ ಯೇಸುವಿನ ಜನನದ ವಿಚಾರದ ಸಂಗಡ ಮತ್ತಾಯ ಮತ್ತು ಹೊಸ ಒಡಂಬಡಿಕೆಯಲ್ಲಿನ ಇತರೆ ಸಂಗತಿಗಳನ್ನು ಕ್ಲುಪ್ತವಾಗಿ

ಬರಹಗಾರರು ತಿಳಿಸಿರುವರು.

ವಿಶೇಷವಾಗಿ ಮತ್ತಾಯ 1ರಲ್ಲಿ, ಯೇಸುವಿನ ಹಾಗೂ ಆತನು ಯಾರು ಎಂಬ ಸತ್ಯಾಂಶಗಳನ್ನು ತಿಳಿಸಲಾಗಿದೆ.

## ಇಸ್ರಾಯೇಲ್ಯರ ಮೆಸ್ಸೀಯನಾದ, ಯೇಸು

ಮತ್ತಾಯ 1:1 ರಲ್ಲಿ, ಯೇಸು ಕ್ರಿಸ್ತನ ವಂಶಾವಳಿ ಎಂದು ಆರಂಭಗೊಳ್ಳುತ್ತದೆ. "ಯೇಸು ಕ್ರಿಸ್ತನ" ಹೆಸರು ನಮಗೆ ಬಹಳ ಪರಿಚಯವಿರುವದರಿಂದ "ಕ್ರಿಸ್ತನು ಎಂಬದು ಯೇಸುವಿನ ಕಡೇಯ ನಾಮ ಎಂದು ತಿಳಿಯುತ್ತೇವೆ." ಆ ನಾಮವು ಈ ವಿಧವಾಗಿ ಕರೆಯಲ್ಪಟ್ಟಿದ್ದರೂ, ಅದರ ಮೂಲದಲ್ಲಿ ವ್ಯತ್ಯಾಸವಿರುತ್ತದೆ.

"ಕ್ರಿಸ್ತ" ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ "ಕ್ರಿಸ್ತೋಸ್" ಅಂದರೆ "ಮೆಸ್ಸೀಯ" ಎಂಬ ಇಬ್ರಿಯ ಭಾಷೆಯ ಸಮನಾದ ಅರ್ಥವಾಗಿರುತ್ತದೆ. *ಯೇಸುಕ್ರಿಸ್ತನು* ಎಂಬ ನಾಮಕ್ಕಿಂತಲೂ, ಅದರಲ್ಲಿ ಮಹತ್ವದ ಆಧ್ಯತೆಯಿರುತ್ತದೆ; ಅದು ನಂಬಿಕೆಯ ಮಹತ್ವದ ಪಾತ್ರವನ್ನು ಹೊಂದಿರುತ್ತದೆ. ಹೊಸ ಒಡಂಬಡಿಕೆಯ ಕೆಲವು ಅನುವಾದದಲ್ಲಿ (KJV; ASV; NIV; ESV) "ಯೇಸು ಕ್ರಿಸ್ತ" ಎಂಬ ಸರಳ ಹೇಳಿಕೆಯನ್ನು ನೀಡಲಾಗಿದೆ (ಮತ್ತಾಯ 1:1). ಇತರೆ ಕಡೆಗಳಲ್ಲಿ (NASB; NRSV; NLT) "ಕ್ರಿಸ್ಟೋಸ್" ಅಂದರೆ "ಮೆಸ್ಸೀಯ" ಎಂದು ಅನುವಾದಿಸಲಾಗಿದೆ, "ಯೇಸು ಕ್ರಿಸ್ತನು" ಅಂದರೆ "ಮೆಸ್ಸಿಯನಾದ ಯೇಸು" ಎಂಬ ಅರ್ಥವಾಗಿದೆ. (16 ರಿಂದ 18 ರವರೆಗೆ "ಮೆಸ್ಸೀಯ" ಎಂದು ಮೊದಲು, ನಂತರ ಕ್ರಿಸ್ತನು ಎಂದು ಓದುವಾಗ, ಅದರ ಶಬ್ಧದಲ್ಲಿ ವ್ಯತ್ಯಾಸ ನೋಡಬಹುದು.)

"ಮೆಸ್ಸೀಯ" ಅಂದರೇನು? ಅಕ್ಷರಶಃ "ಅಭಿಷೇಕ ಹೊಂದಿದವನು" ಎಂಬದೇ. ಹಳೇ ಒಡಂಬಡಿಕೆಯಲ್ಲಿ, ಪ್ರವಾದಿಗಳನ್ನು ದೇವರ ಪ್ರತಿನಿಧಿ ಎಂದು ಅಭಿಷೇಕ ಮಾಡುತ್ತಿದ್ದರು. 2 ಸಮುವೇಲ 7ರಲ್ಲಿ, ದಾವೀದನಿಗೆ ವಾಗ್ದಾನವಾದಂತೆ, ಇಸ್ರಾಯೇಲ್ಯರನ್ನು ಆಳಲು, ಅವನ ಸಿಂಹಾಸನದ ಮೇಲೆ ಕೂತುಕೊಳ್ಳುವ ನಿರ್ಧಿಷ್ಟವಾದ ಅರಸನಿಗೆ "ಮೆಸ್ಸೀಯನು" ಎನ್ನಲಾಗಿತ್ತು. ಪ್ರವಾದಿಯಾದ ಯೆಶಾಯನ ಮೂಲಕ ಈ ವಿಧವಾದ ಬಿಡುಗಡೆಯನ್ನು ನೀಡುವ ವಿಮೋಚಕನ ಕುರಿತು ಭರವಸವನ್ನು ನೀಡಲಾಯಿತು. ಒಂದು ದಿವಸ ದೇವರು "ಅವರ ರಾಜ್ಯವನ್ನು ಪುನಃ ಸ್ಥಾಪಿಸುವನು" ಎಂದು ಹೇಳಲ್ಪಟ್ಟಾಗ, ದೇವರು ಅವರ ವೈರಿಗಳನ್ನು ನಾಶಪಡಿಸುವನು ಎಂದು ತಿಳಿದರು.

ಅಬ್ರಹಾಮನ ಮತ್ತು ದಾವೀದನ ವಂಶದವನಾದ ಯೇಸು ವಾಗ್ದಾನದ ಮೆಸ್ಸೀಯನು ಎಂಬ ಉದ್ದೇಶವನ್ನು ಮತ್ತಾಯನಲ್ಲಿರುವ ವಂಶಾವಳಿಯು ತಿಳಿಸುತ್ತದೆ. ವಚನ 1:1 ರಲ್ಲಿ, ಕ್ರಮಾಂಕದ ಪ್ರಕಾರ ಅಬ್ರಹಾಮನು ಮೊದಲಿಗನಾಗಿದ್ದರೂ, ದಾವೀದನ ಹೆಸರು ಅವನ ಹೆಸರಿಗಿಂತ ಮುಂಚೆ ತಿಳಿಸಿರುವದನ್ನು ಗಮನಿಸುತ್ತೇವೆ. ಯೇಸು ದಾವೀದನ ವಂಶದ ಮೆಸ್ಸೀಯನು, ಆತನು ನಿರಂತರವಾಗಿ ಆಳುವನು ಎಂಬ ವಾಗ್ದಾನದ ಅಂಶವನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.

ದೇವರು, ದಾವೀದನ ಮೂಲಕ ಇಸ್ರಾಯೇಲ್ಯರಿಗೆ ಮಾಡಿದ ವಾಗ್ದನಗಳನ್ನು ಯೇಸುವಿನಲ್ಲಿ ನೆರವೇರಿಸಿದನು ಎಂಬುದು ಮತ್ತಾಯನ ಸಂದೇಶವಾಗಿದೆ. ಆದ್ದರಿಂದ ಮತ್ತಾಯ, ಮಾರ್ಕ, ಲೂಕ (ಸೈನೋಪ್ಟಿಕ್ಸ್ ಗಾಸ್ಪಲ್ಸ್), "ದೇವರ ರಾಜ್ಯದ" ಕುರಿತ ಯೇಸುವಿನ ಬೋಧನೆಗಳನ್ನು ಒತ್ತಿ ಹೇಳಲಾಗಿದೆ (ಮತ್ತಾಯದಲ್ಲಿ "ಪರಲೋಕ ರಾಜ್ಯ" ಎಂದಿದೆ). ಯೇಸು ನಿರ್ದಿಷ್ಟ ವಾದ ಅರಸನು, ಆತನ ಬರುವಿಕೆಯ ಮುಖಾಂತರ ಭೂಲೋಕದಲ್ಲಿ ದೇವರ ಆಡಳಿತ ಆರಂಭವಾಯಿತು. ಅಂದಿನಿಂದ ಯೇಸು ಪರಲೋಕ ರಾಜ್ಯವು ಸಮಿಾಪಿಸಿತು; "ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಸಾರಿ ಹೇಳುವದಕ್ಕೆ ಆರಂಭಿಸಿದನು" (ಮತ್ತಾಯ 4:17). ಕಾಯುವ ಸಮಯವು ಅಂತ್ಯವಾಯಿತು. ಮೆಸ್ಸಿಯ/ಅರಸನು ಬಂದನು ಆದ್ದರಿಂದ ಆತನ

ಬರೋಣದ ಕಥೆಯನ್ನು "ಸುವಾರ್ತೆ" ಎಂದು ಕರೆದರು - ದೇವರ ವಾಗ್ದಾನಗಳು ನೆರವೇರುವ ಸಂದರ್ಭದ ಶುಭ ಸಮಾಚಾರ.

## ಲೋಕದ ರಕ್ಷಕನಾದ, ಯೇಸು

ಒಂದು ವೇಳೆ, ಯೇಸು ಯೆಹೂದ್ಯರಿಗೆ ಮಾತ್ರ ಮೆಸ್ಸೀಯನಾಗಿದ್ದರೆ ಯೆಹೂದ್ಯರಲ್ಲದವರಿಗೆ ಅದು ಶುಭಸಮಾಚಾರವಲ್ಲ. ಆದರೆ ಆತನು ಒಂದು ಗುಂಪಿನವರೆಗೆ ಮಾತ್ರವಲ್ಲದೆ, ಎಲ್ಲರಿಗೂ ಸಹ ಬಿಡುಗಡೆ ನೀಡುವವನು ಆಗಿದ್ದಾನೆ. ಆತನು ಲೋಕದ "ರಕ್ಷಕನೂ" ಆಗಿರುವನು.

1:21ರಲ್ಲಿ, ಮರಿಯಳ ಮಗನಿಗೆ, ಯೋಸೆಫನು "ಯೇಸು" ಎಂದು ಹೆಸರಿಡಬೇಕು ಎಂದು ತಿಳಿಸಲಾಗಿದೆ. "ಆತನು ತನ್ನ ಜನರನ್ನು *ಅವರ ಪಾಪಗಳಿಂದ ಬಿಡಿಸುವನು*" ಎಂಬ ಅರ್ಥವಾಗಿದೆ (ಒತ್ತಿ ಹೇಳಿದ್ದು ನನ್ನದು). "ಯೇಸು" ಅಂದರೆ ಇಬ್ರಿಯ ಭಾಷೆಯಲ್ಲಿ, "ಯೆಹೋಶುವ" (ಅಥವ ಯೆಹೋಶುವ), ಅಂದರೆ "ಕರ್ತನು ರಕ್ಷಿಸುವನು," ಅಥವಾ "ಕರ್ತನು ರಕ್ಷಣೆಯಾಗಿದ್ದಾನೆ." ಈ ಮೆಸ್ಸಿಯನಿಗೆ ಈ ಹೆಸರನ್ನು ಏಕೆ ಆಯ್ಕೆ ಮಾಡಿದರು? ಏಕೆಂದರೆ, ಆತನು ತನ್ನ ಜನರನ್ನು ಪಾಪದಿಂದ ಬಿಡಿಸುವವನು. ರೋಮಾಯರ ಆಡಳಿತದಿಂದ ಜನರಿಗೆ ಬಿಡುಗಡೆ ಕೊಡುವದಕ್ಕಾಗಿ ಯೇಸು ಬಂದವನಲ್ಲ; ರೋಮಾಯರಿಗಿಂತಲೂ, ಬಹು ಕ್ರೂರಿಗಳಾದ ವೈರಿಗಳಿಗೂ ರಕ್ಷಕನಾಗಿ ಬಂದವನು.

ಆತನ ವಂಶಾವಳಿಯು, ಜಗತ್ತಿನ ರಕ್ಷಣೆಯನ್ನು ಪ್ರಚುರ ಪಡಿಸುತ್ತದೆ (ಅದು ಯೆಹೂದ್ಯರಿಗೆ ಮಾತ್ರವಾಗಿರದೆ, ಪಾಪಿಗಳಿಗೂ ಮೀಸಲಾಗಿದೆ). ಆ ನಾಲ್ವತ್ತೆರಡು ತಲೆ ಮಾರುಗಳನ್ನು ಗಮನಿಸುವಾಗ, ಪಾಪದ ಕುರಿತು ದಿಗ್ಭ್ರಮೆಗೊಳ್ಳುವ ಕಥೆಗಳನ್ನು ಅದರಲ್ಲಿ ಕಾಣುತ್ತೇವೆ. ದಾವೀದನು ತಾನೇ ವ್ಯಭಿಚಾರ, ಕೊಲೆ, ಹಾಗೂ ಸುಳ್ಳಿನ ಪಾಪಕ್ಕೆ ಒಳಗಾದನು (2 ಸಮುವೇಲ 11; 12). ಹನ್ನೆರಡು ಕುಲಗಳ ಮೂಲ ಪಿತೃವಾದ ಯಾಕೋಬನು ವಂಚಕನಾದನು - ಅಂಥವನೊಂದಿಗೆ ವ್ಯವರಿಸಲು ಯಾರು ಧೈರ್ಯಮಾಡುವದಿಲ್ಲ (ಆದಿಕಾಂಡ 27-31)! ಅತಿ ವಿವೇಕಿಗಳಲ್ಲಿ ಶ್ರೇಷ್ಟನಾದ ಸೊಲೊಮೋನನು ನಂತರದ ವರ್ಷಗಳಲ್ಲಿ ಹೆಂಡತಿಯರ ನಿಮಿತ್ತ ಪರದೇವತೆಗಳನ್ನು ಪೂಜಿಸಿ, ಅವಗಳನ್ನು ತನ್ನವರಿಗೆ ಪರಿಚಯಿಸಿದನು (1 ಅರಸು 11:1-8). ಬಹು ಕೆಡುಕನಾದ ಇಸ್ರಾಯೇಲ್ಯರ ಮನಸ್ಸೇ ಎಂಬ ಅರಸನು ದೇವಾಲಯದಲ್ಲಿಯೇ ಅನ್ಯ ದೇವತೆಗೆ ಒಂದು ವೇದಿಕೆಯನ್ನು ಕಟ್ಟಿಸಿದನು (2 ಅರಸು 21:1, 4-6). ಹೇಗಿದ್ದರೂ, ಅವರೆಲ್ಲರೂ ಯೇಸುವಿನ ಮೂಲದವರೆ ಆದ್ದರಿಂದ ಆತನು "ನಿಜವಾದ ಪಾಪಿಗಳನ್ನು" ರಕ್ಷಿಸಲು ಬಂದವನು ಎಂದು ತಿಳಿಸಲಾಗಿದೆ (ಈ ವಿಚಾರವನ್ನು ಮತ್ತಾಯನು ತಾನಾಗಿ ಬರೆಯದೆ ಹಾಗೂ ಯೇಸುವಿನ ವಂಶಾವಳಿಯನ್ನ ತಾನೇ ಸೃಷ್ಟಿಸಿರುವದಿಲ್ಲ ಎಂಬ ಸೂಚನೆಯಿದೆ.)

ಈ ವಂಶಾವಳಿಯಲ್ಲಿ ಸ್ತ್ರೀಯರು ಸಹ ಒಳಗೊಂಡಿರುವರು. ಈ ಹೆಸರಿನ ಪಟ್ಟಿಯಲ್ಲಿ ತಾಮಾರಳು, ರಾಹಾಬಳು, ರೂತಳು, ಬೆತ್ಷೆಬ ಹಾಗೂ ಮೇರಿ ಎಂಬ ಹೆಸರುಗಳಿವೆ. ಯೆಹೂದ್ಯರ ವಂಶಾವಳಿಯಲ್ಲಿ ಸ್ತ್ರೀಯರ ಹೆಸರನ್ನು ಸೇರಿಸುವದು ಅಸಹಜವಾಗಿರಲಿಲ್ಲ (ಉದಾಹರಣೆ ಆದಿಕಾಂಡ 4:17-22ನ್ನು ಆದಿಕಾಂಡ 10:1-20 ರೊಂದಿಗೆ ಹೋಲಿಸಿರಿ). ವಂಶಾವಳಿಯಲ್ಲಿ ಐದು ಸ್ತ್ರೀಯರನ್ನು ಸೇರ್ಪಡೆ ಮಾಡಿರುವದರಿಂದ, ಸ್ತ್ರೀಪುರುಷರ ವಂಶಾವಳಿಯಿಂದಲೇ, ಯೇಸು ರಕ್ಷಕನಾಗಿ ಬಂದನು ಎಂದು ಮತ್ತಾಯನು ತಿಳಿಸಿರುವನು. ಹಾಗೂ ದೇವರ ಯೋಜನೆಯ ಕಾರ್ಯದಲ್ಲಿ ಸ್ತ್ರೀಯರ ಪಾತ್ರವೂ ಪ್ರಮುಖವಾಗಿತ್ತು ಎಂಬ ಅಂಶವನ್ನು ನೋಡುತ್ತೇವೆ.

ಇದರ ಸಂಗಡ, ಈ ವಂಶಾವಳಿಯು ಇತರೆ ಪಂಗಡದ ಪ್ರಖ್ಯಾತಿಯನ್ನು ಹೊಂದಿರುತ್ತದೆ, ತಿಳಿಸಿರುವ ಐದು ಸ್ತ್ರೀಯರಲ್ಲಿ ನಾಲ್ಕು ಜನರು ಯೆಹೂದ್ಯರಾಗಿರಲಿಲ್ಲ. ಯೂದನು ತನ್ನ ಮಗನಿಗಾಗಿ ಕಾನನ್ಯ ಸ್ತ್ರೀಯಾದ ತಾಮಾರಳನ್ನು ತಂದುಕೊಂಡನು. ರಾಹಾಬಳು ಕಾನಾನ್ಯ

ಸೂಳೆಯಾಗಿದ್ದಳು. ರೂತಳು ಮೋವಾಬ್ಯಳಾಗಿದ್ದು, ಇಸ್ರಾಯೇಲ ಕುಟುಂಬಕ್ಕೆ ಮದುವೆಯಾದಳು. ಬೆತ್ಷೆಬಳೊಂದಿಗೆ ಅರಸನಾದ ದಾವೀದನು ವ್ಯಭಿಚಾರ ಮಾಡಿದನು, ಅವಳು ಹಿತ್ತೀಯನಾದ ಊರಿಯನ ಹೆಂಡತಿಯಾಗಿದ್ದಳು. ಈ ವಂಶಾವಳಿಯಲ್ಲಿಯೂ ಸಹ "ಸೇವೆಯ ಮಹಾ ಅಪ್ಪಣೆಯನ್ನು" ನೋಡುತ್ತೇವೆ. ಅಂದರೆ ಮತ್ತಾಯನು ಈ ಅಪ್ಪಣೆಯೊಂದಿಗೆ ತನ್ನ ಬರವಣಿಗೆಯನ್ನು ಅಂತ್ಯಮಾಡಿ: "ನೀವು ಹೊರಟುಹೋಗಿ *ಎಲ್ಲಾ ದೇಶಗಳ* ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿರಿ. ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿ ಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" (28:19, 20ಎ; ಒತ್ತಿ ಹೇಳಿದ್ದು ನನ್ನುದು).

ಸ್ತ್ರೀ ಪುರುಷರಾಗಿದ್ದರೂ, ಯೆಹೂದ್ಯ ಅಥವಾ ಅನ್ಯರಾಗಿದ್ದರೂ ಅವರೆಲ್ಲರೂ ಪಾಪಿಗಳೇ ಇವರೆಲ್ಲರಿಗಾಗಿ "ಯೇಸು; ರಕ್ಷಕನಾಗಿರುವನು" ಎಂಬ ಅಂಶವನ್ನು ಮತ್ತಾಯನು *ಸ್ಪಷ್ಟ* ಮಾಡಿದ್ದಾನೆ.

## ಯೇಸು, ದೇವರೂ ಹಾಗೂ ಮನುಷ್ಯನೂ ಆಗಿರುವನು

ಯೇಸುವಿನ ಗರ್ಭಧಾರಣೆ ಹಾಗೂ ಜನನದ ಕಥೆಯಲ್ಲಿ, ಯೇಸು, ಯೋಸೇಫನ ದೈಹೀಕ ಮಗನಲ್ಲ ಎಂದು ಒತ್ತಿ ಹೇಳಿರುವನು. ಮರಿಯಳಿಗೂ ಯೋಸೇಫನಿಗು "ಮದುವೆಯ ನಿಶ್ಚಿತಾರ್ಥವಾಗಿದ್ದರೂ," ಅವರಿಬ್ಬರೂ ಧೈಹಿಕವಾಗಿ ಸೇರುವ ಮೊದಲೇ ಮರಿಯಳು ಗರ್ಭಿಣಿಯಾಗಿದ್ದಳು (1:18). ವಚನ 25ರಲ್ಲಿ, "ಅವಳು ಮಗನನ್ನು ಹೆರುವವರೆಗೆ, ಅವನು ಅವಳನ್ನು ಅರಿಯಲಿಲ್ಲ" ಎಂದು ನೋಡುತ್ತೇವೆ (ESV). ಪವಿತ್ರಾತ್ಮನ ಕಾರ್ಯದಿಂದಲೇ ಆಕೆಯು ಬಸುರಾದಳು ಎಂದು ಮತ್ತಾಯನು ಎರಡು ಸಾರಿ ತಿಳಿಸಿರುವನು (18, 20 ವಚನಗಳು), ವಚನ 23ರಲ್ಲಿ ಆಕೆಯು ಕನ್ಯೆಯಾಗಿದ್ದಳು ಎಂಬ ವಿಶೇಷ ಮಾತುಗಳಿವೆ. (ಯೇಸು, ಯೋಸೇಫನ ಧೈಹಿಕ ಮಗನಾಗದಿದ್ದರೂ, ಆತನು ವಂಶಾವಳಿಯಿಂದ ಹೊರತಾಗಿರುವದಿಲ್ಲ, ದತ್ತು ಪುತ್ರನು ಸಹ, ದತ್ತು ತೆಗೆದುಕೊಂಡ ತಂದೆಯ ವಂಶದವನಾಗುವನು.) ದೇವರು, ಯೆಶಾಯನ ಮೂಲಕ ಮುಂದಾಗಿ ತಿಳಿಸಿದ ಕಾರ್ಯವು ನೆರವೇರುವಂತೆ ಅಸಾಧರಣವಾದ, ಯೇಸುವಿನ ಗರ್ಭ ಹಾಗೂ ಜನನ ಉಂಟಾಯಿತು: "ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್" ಎಂದು ಹೆಸರಿಡುವಳು (ಅಂದರೆ ದೇವರು ನಮ್ಮ ಕೂಡ ಇದ್ದಾನೆ) (ಯೆಶಾಯ 7:14). ಆದ್ದರಿಂದ ದೇವರು ಯೇಸುವನ್ನು ದೇವರನ್ನಾಗಿಯೂ, ಮಾನವನನ್ನಾಗಿಯೂ ಈ ಭೂಲೋಕ್ಕೆ ಕಳುಹಿಸಲು ಈ ಮಾರ್ಗವನ್ನು ಬಳಸಿದನು. ಆತನು ಶೇಕಡ 100/ರಷ್ಟು ದೇವರು, ಶೇಕಡ 100ರಷ್ಟು ಮಾನವನು ಎಂದು ಹೊಸ ಒಡಂಬಡಿಕೆಯು ತಿಳಿಸುತ್ತದೆ. ಆದರೆ ಇದು ದೇವರ ಸದ್ಗುಣದ ಒಂದು ರಹಸ್ಯವಾಗಿದೆ.

ವಂಶಾವಳಿಯ ಒಂದು ಸಾರಾಂಶವೇನೆಂದರೆ, ಯೇಸು ಕ್ರಿಸ್ತನು ಮಾನವನಾಗಿ ಬಂದು, ಇತಿಹಾಸದ ಒಂದು ಸಮಯದಲ್ಲಿ ಜೀವಿಸಿದ್ದನು ಹಾಗೆ ನಿರ್ಧಿಷ್ಟವಾದ ವಂಶಾವಳಿಯನ್ನು ಹೊಂದಿದ್ದನು ಎಂಬ ಅಂಶವನ್ನು ಒತ್ತಿ ಹೇಳಲಾಗಿದೆ (ನೋಡಿರಿ ಲೂಕ 3:1, 2; ಇತಿಹಾಸದಲ್ಲಿನ ಯೇಸುವಿನ ಗುರುತನ್ನು ತೋರಲಾಗಿದೆ). ಯೇಸು ಇತಿಹಾಸದ ವ್ಯಕ್ತಿಯಲ್ಲ ಆತನು ಕೇವಲ ಒಂದು ಆಲೋಚನೆ, ಅಥವಾ ಭ್ರಮೆ ಎಂದು ಹೇಳುವವರಿಗೆ ಈ ವಿಚಾರವು ಅರ್ಥವಾಗುವದಿಲ್ಲ. ಹೊಸ ಒಡಂಬಡಿಕೆಯಲ್ಲಿನ ಒಂದು ಕಾಲದಲ್ಲಿ ಯೇಸು ಎಂಬವನು ಇದ್ದನು ಎಂದು ಆರಂಭಗೊಂಡಿರುವದಿಲ್ಲ. ನಾವು ಯಾವುದೇ ಒಂದು ಪುರಾಣ ಅಥವಾ ಊಹೆಯ ಕಥೆಯನ್ನು ಹೇಳುತ್ತಿರುವದಿಲ್ಲ, ಪೂರ್ಣವಾದ ದೇವರ ಮಗನ ಕುರಿತಾಗಿ ಮಾತನಾಡುತ್ತಿದ್ದೇನೆ.

ಅದೇ ಸಮಯದಲ್ಲಿ, ಯೇಸು ಪೂರ್ಣವಾಗಿ ದೇವರಾಗಿರುವನು. ಪರ್ವತದ ಮೇಲೆ

ಯೇಸು ಪ್ರಕಾಶಗೊಂಡಾಗ, ಆತನ ಮೂರು ಜನ ಶಿಷ್ಯರು ಅದಕ್ಕೆ ಸಾಕ್ಷಿಗಳಾಗಿದ್ದರು (ಮತ್ತಾಯ 17:1-8). ಪೇತ್ರ, ಯಾಕೋಬ ಹಾಗೂ ಯೋಹಾನರು ಯೇಸುವಿನೊಂದಿಗೆ ಬೆಟ್ಟಕ್ಕೆ ಹೋದರು, ಅದರ ಕಣ್ಣ ಮುಂದೆ, ಆತನು ಬದಲಾದನು. ಆಗ ಅವರು ಆತನನ್ನು ಪೂರ್ಣ ಮಹಿಮೆಯೊಂದಿಗೆ ಕಂಡರು. ಮೋಶೆ ಮತ್ತು ಎಲೀಯ ಆತನ ಸಂಗಡ ಇದ್ದರು. ಪೇತ್ರನು ಅವರಿಗಾಗಿ ಮೂರು ಪರ್ಣಶಾಲೆಗಳನ್ನು ಮಾಡಬೇಕೆಂದಿದ್ದಾಗ, ಆ ಚಿತ್ರಣವನ್ನು ಮೋಡವು ಕವಿದುಕೊಂಡಿತು. ಒಂದು ಆಕಾಶವಾಣಿ (ಸಹಜವಾಗಿ ದೇವರ ಸ್ವರ) ಮಾತನಾಡಿ, "ಈತನು ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ; ಆತನ ಮಾತನ್ನು ಕೇಳಿರಿ" ಎಂದು ಹೇಳಿತ್ತು! ಇಲ್ಲಿಯವರೆಗೆ, ಅವರು ಯೇಸುವನ್ನು ಕೇವಲ ಒಬ್ಬ ಮನುಷ್ಯನನ್ನಾಗಿ ಕಂಡಿದ್ದರು ಆದರೆ ಈಗ ಮಾಂಸದಾರಿಯಾದ ದೇವರ ಮಗನು ದೈವೀಕ ಸ್ವಭಾವದಲ್ಲಿ ಪೂರ್ಣ ಪಾತ್ರದಾರಿ ಎಂದು ತಿಳಿದರು, ನಂತರದಲ್ಲಿ ಪೌಲನು ತಿಳಿಸಿರುವಂತೆ (ಕೊಲೊಸ್ಸೆ 1:19; 2:9).

ಯೇಸು, ದೇವರ ನಿರ್ಧಿಷ್ಟವಾದ ಮಗನಾಗಿದ್ದು, ದೇವರ ಯೋಜಿತ ಹಾಗೂ ನಿಯಮಿತಕ್ಕೆ ಸರಿಯಾಗಿ ಈ ಲೋಕಕ್ಕೆ ಬಂದನು ಎಂದು ಮತ್ತಾಯ1 ಮತ್ತು 2 ರಲ್ಲಿ ಒತ್ತಿ ಹೇಳಲಾಗಿದೆ. ಎಂಟು ನೂರು ವರ್ಷಗಳ ಹಿಂದೆಯೇ ಯೇಸುವಿನ ಬರೋಣದ ಕುರಿತಾಗಿ ಯೆಶಾಯನು ಮುಂತಿಳಿಸಿದನು (ಯೆಶಾಯ 7:14; 9:1-7). ಮತ್ತಾಯ 1:21, 25ರ ಪ್ರಕಾರ, ಆತನ ಹೆಸರನ್ನು ಸಹ ಧೈವೀಕವಾಗಿ ಆಯ್ಕೆ ಮಾಡಲಾಗಿತ್ತು. ಅಧ್ಯಾಯ 2ರಲ್ಲಿ ತೆಗೆದುಕೊಂಡ ಯೋಸೇಫನಿಗೆ ಧೈವೀಕ ಸಂರಕ್ಷಣೆ ಉಂಟಾಯಿತು ಮತ್ತು ಮಗುವನ್ನು ಕಾಪಾಡಲು ಅವನಿಗೆ ಧೈವೀಕ ಮಾರ್ಗದರ್ಶನವೂ ದೊರಕಿತು. ಅರಸನಾದ ಹೆರೋದನು ಆ ಕೂಸನ್ನು ಸಂಹಾರ ಮಾಡಬೇಕೆಂದು ಒಳಸಂಚು ಮಾಡುತ್ತಿರುವಾಗ, ಮೂಡಣ ದೇಶದ ಪಂಡಿತರುಗಳು ಅರಸನನ್ನು ಪುನಃ ಸಂಧಿಸಬಾರದೆಂಬ ಮಾರ್ಗದರ್ಶನವನ್ನು ಕನಸಿನಲ್ಲಿ ಕಂಡುಕೊಂಡರು (ಧೈವೀಕ ಮಾರ್ಗದರ್ಶನ). ಏಕೆಂದರೆ ಅವರು ಈ ಹೊಸ ಅರಸನ ಹಾಗು ಹೋಗುಗಳನ್ನು ಬಯಲು ಪಡಿಸುವ ಸಾಧ್ಯತೆಗಳಿದ್ದವು ಎಂದು ನೋಡುತ್ತೇವೆ (2:12). ಅದೇ ರೀತಿಯಲ್ಲಿ ತನ್ನ ಕುಟುಂಬವನ್ನು ಕರೆದುಕೊಂಡು ಐಗುಪ್ತಕ್ಕೆ ಹೋಗಬೇಕೆಂಬ ಸೂಚನೆಯನ್ನು ಯೋಸೇಫನು ಕನಸಿನಲ್ಲಿ ಕಂಡುಕೊಂಡನು (2:13-15). ಹೆರೋದನ ಮರಣದ ನಂತರ, ಯೋಸೇಫನು ಇಸ್ರಾಯೇಲಿಗೆ ಹಿಂದಿರುಗಬೇಕೆಂಬ ಸಲಹೆಯನ್ನು ಪುನಃ ಪಡೆದನು, ಆದರೆ ಹೆರೋದನ ಮಗನಾದ ಅರ್ಕೇಲನು ಆಳುತ್ತಿದ್ದ, ಯುದಾಯ ಪ್ರಾಂತಕ್ಕೆ ಹೋಗಬಾರದೆಂಬ ಸೂಚನೆಯನ್ನು ಸಹ ಪಡೆದನು.

ನಾವುಗಳು ಈ ಪ್ರಪಂಚದಲ್ಲಿ ಇರುವಂತೆ, ದೇವಕುಮಾರನು ಸಹ ಮನುಷ್ಯನಾಗಿ ಈ ಲೋಕಕ್ಕೆ ಬಂದನು - ಹಾಗೂ ಮಗುವಾಗಿ ಬಂದನು. ಆತನ ಅಸಾಹಯಕ ಪರಿಸ್ಥಿತಿಯಲ್ಲೂ, ಆತನ ತಂದೆಯಾದ ದೇವರು ಆತನನ್ನು ಕಾಪಾಡಿ, ಆತನು ಪಾಪದ ಪರಿಹಾರ ಕಾರ್ಯಕ್ಕಾಗಿ ಮರಣವನ್ನು ಹೊಂದುವವರೆಗೆ ಮುನ್ನಡೆಸಿದನು - ಈ ಕಾರ್ಯವು ಮಗನಾದ ಯೇಸು ಕ್ರಿಸ್ತನು ಮಾತ್ರ ಮಾಡಲು ಸಾಧ್ಯವಿತ್ತು.

ಇಸ್ರಾಯೇಲ್ಯರ ಐಶ್ವರ್ಯವುಳ್ಳ ಹಾಗೂ ಇತಿಹಾಸದ ಪ್ರವಾದನೆಗಳನ್ನು ಯೇಸು ತಾನೇ ಅಂತಿಮವಾಗಿ ನೆರವೇರಿಸಿದನು ಎಂದು ಮತ್ತಾಯನ ಆರಂಭಿಕ ವಚನಗಳಲ್ಲಿ ವಿಶ್ಲೇಷಿಸಲಾಗಿದೆ.

## ಮುಕ್ತಾಯ

ಸುವಾರ್ತೆಯ ಬರವಣಿಗೆಕಾರನು ಕೇವಲ ಇತಿಹಾಸದ ಪಾಠವನ್ನು ತಿಳಿಸುತ್ತಿರುವದಿಲ್ಲ. ಅವನು ನಮ್ಮ ಮೆಸ್ಸೀಯನ, ನಮ್ಮ ರಕ್ಷಕನ, ಮಾಂಸದಾರಿಯಾಗಿ ಬಂದ ನಮ್ಮ ದೇವರ ಕುರಿತು ಹೇಳುತ್ತಿರುವನು. ನಾವ್ಯಾರು ಸಹ ಈ ಸಂದೇಶವನ್ನು ಅಸಡ್ಡೆ ಮಾಡಬಾರದು, ಏಕೆಂದರೆ ನಾವೆಲ್ಲರೂ ಪಾಪಿಗಳ ಸಾಲಿನಲ್ಲಿ ನಿಂತಿದ್ದೇವೆ. ನಮಗೆಲ್ಲರಿಗೂ ವಿಮೋಚನೆ,

ಪಾಪಕ್ಷಮೆ, ಪವಿತ್ರತೆಯ ಅಗತ್ಯವಿದೆ, ಅದನ್ನು ಯೇಸು ಮಾತ್ರ ನೀಡಲು ಸಾಧ್ಯ.

ಯೇಸು ಕ್ರಿಸ್ತನು ಕಥೆಗಿಂತಲೂ ಹೆಚ್ಚಿನ ಮಹತ್ವವನ್ನು ಮತ್ತಾಯನ ಸುವಾರ್ತೆಯಲ್ಲಿ (ಹಾಗೂ ಹೊಸ ಒಡಂಬಡಿಕೆಯಲ್ಲಿ) ನೋಡುತ್ತೇವೆ. ನಾವುಗಳು ಇದನ್ನು ನಂಬಿ, ವಿಧೇಯರಾಗಿ ರಕ್ಷಣೆಯನ್ನು ಪಡಕೊಳ್ಳಬೇಕೆಂಬ ಆದೇಶವಾಗಿದೆ. ನಾವು ಕೇಳಲೇ ಬೇಕಾದ ಶುಭಸಮಾಚಾರವೂ ಈ ವಿಚಾರವಾಗಿದೆ.

ಟಿಪ್ಪಣಿ

[1]Thomas G. Long, *Matthew*, Westminster Bible Companion (Louisville: Westminster John Knox Press, 1997), 8.

## ಮತ್ತಾಯ ಹಾಗೂ ಲೂಕನಲ್ಲಿ ದಾಖಲಾಗಿರುವ ಜನನದ ಕಥೆ

(ಮತ್ತಾಯ 1; 2; ಲೂಕ 1; 2), ಯೇಸುವಿನ ಜನನದ ಕುರಿತು ಎರಡು ಸುವಾರ್ತೆಗಳಲ್ಲಿ ಮಾತ್ರ ದಾಖಲಾಗಿರುವದರಿಂದ ಇವೆರಡರಲ್ಲಿನ ಹೋಲಿಕೆಗಳನ್ನು ಗಮನಿಸೋಣ.

ಮತ್ತಾಯನು ಯೋಸೇಫನ ಕುರಿತು ಹೆಚ್ಚುಹೇಳುತ್ತಾನೆ, ದೇವರು ಅವನೊಂದಿಗೆ ಮಾತನಾಡಿದ ಬಗ್ಗೆ, ಹಾಗೂ ಮರಿಯಳು ಗರ್ಭಧರಿಸಿದ ಬಗ್ಗೆ ತಿಳಿಸಿರುವನು. ಲೂಕನು ಮರಿಯಳಿಗೆ ಕಾಣಿಸಿಕೊಂಡನು, ವಿಧೇಯತೆಯ ನಿಮಿತ್ತ ಆಕೆಯ ದೇವರ ಮೆಚ್ಚುಗೆಗೆ ಪಾತ್ರಳಾದಳು, ಮತ್ತು ಆಕೆಯ ಎಲೀಜಬೇತಳನ್ನು ಸಂದಿಸಿದ ವಿಷಯವನ್ನು ತಿಳಿಸಿರುವನು.

ಮತ್ತಾಯನಲ್ಲಿ, ಮೂಡಣ ದೇಶದವರು ಬಂದು ಮಗುವಾದ ಯೇಸವನ್ನು ಆರಾಧಿಸಿದರು (ಪಂಡಿತರು), ಅವರು ಬೆಲೆಯುಳ್ಳ ಬಹುಮಾನವನ್ನು ನೀಡಿದ್ದರಿಂದ, ಅವರು ಬಹುಧನಿಕರಾಗಿದ್ದರು ಎಂದು ತಿಳಿಯುತ್ತೇವೆ. ಲೂಕನಲ್ಲಿ ಯೇಸುವಿನ ಜನನವನ್ನು ಬಡವ ರಾದ ಕುರುಬರಿಗೆ ತಿಳಿಸಲಾಯಿತು.

ಮತ್ತಾಯನು ಯೇಸುವಿನ ಅಬ್ರಹಾಮನ ಸಂಬಂಧದ ವಂಶಾವಳಿಯನ್ನು ತಿಳಿಸಿದ್ದಾನೆ, ಲೂಕನು ಸಹ ತಿಳಿಸಿದ್ದಾನೆ (ಲೂಕ 3:23-38). ಲೂಕನು ದೇವರಿಂದಲೂ, ಅದಾಮನಿಂದಲೂ ಇರುವ ವಂಶಾವಳಿಯನ್ನು ತಿಳಿಸಿರುವನು. ಇಲ್ಲಿ ಯೇಸುವನ್ನು ಇಸ್ರಾಯೇಲ್ಯರ ಸಂಬಂಧದಲ್ಲಿ ಮಾತ್ರ ತಿಳಿಸದೆ, ಮನವರೆಲ್ಲರ ಸಂಬಂಧದಲ್ಲಿ ತಿಳಿಸಲಾಗಿದೆ, ಏಕೆಂದರೆ ಸಾರ್ವತ್ರಿಕವಾದ ರಕ್ಷಕನ ಕುರಿತು ಲೂಕನು ತಿಳಿಸಿರುವನು. ಈ ಎರಡು ವಂಶಾವಳಿಗಳು ಒಂದೇ ರಕ್ಷಕನ ಕುರಿತು ಲೂಕನು ತಿಳಿಸಿರುವನು. ಈ ಎರಡು ವಂಶಾವಳಿಗಳು ಒಂದೇ ಆಗಿರುವದಿಲ್ಲ, ಇವೆರಡರಲ್ಲೂ ತಪ್ಪುಗಳಿವೆ ಎಂಬುದಾಗಿರುವದಿಲ್ಲ ಪ್ರತಿ ಬರಹಗಾರರು ತಮ್ಮ ದೃಷ್ಟಿಕೋನವನ್ನು ತಿಳಿಸಿರುವರು.

ಮತ್ತಾಯನಿಗಿಂತಲೂ, ಲೂಕನಲ್ಲಿ ವಿಶೇಷ ವೈಶಿಷ್ಟತೆಯನ್ನು ತಿಳಿಸಲಾಗಿದೆ. ಲೂಕನು, ಮಾತ್ರ ಸ್ನಾನಿಕನಾದ ಯೋಹಾನನ ವೃತ್ತಾಂತವನ್ನು ಹಾಗೂ ಯೇಸುವಿನ ಬಾಲ್ಯದ ಚರಿತ್ರೆಯನ್ನು ತಿಳಿಸಿರುವನು ಹನ್ನೆರಡನೇ ವಯಸ್ಸಾನಲ್ಲಿ ಯೇಸು ದೇವಾಯದಲ್ಲಿದ್ದನು (ಲೂಕ 2:41-52).

## ಗ್ರಂಥಗಳ ನೆರವೇರಿಕೆ

ವಾಕ್ಯವು ಈಡೇರಿತು ಅಂದರೆ ಪ್ರವಾದನೆಯು "ಸತ್ಯವಾಯಿತು" - ಒಬ್ಬರು ಹೇಳಿದ ಸಂಗತಿ ನೆರವೇರಿತು ಎಂಬದೆ ಮೀಕ 5:2 ರಲ್ಲಿ ಮೆಸ್ಸೀಯನ ಕುರಿತು ಮುಂತಿಳಿಸಲಾಗಿತ್ತು (ಮತ್ತಾಯ 2:3-6). ಕೆಲವು ಸಾರಿ ಇದು ಜಟಿಲ ಸಂಗತಿಯಾಗಿದೆ.

ದೇವರ ವಾಕ್ಯವು "ಪೂರ್ಣ ನೆರವೇರಿತು" ಎಂಬ ಅರ್ಥವಾಗಿರುತ್ತದೆ. ಮರಿಯಳಲ್ಲಿನ ಯೇಸುವಿನ ಜನನವು ಯೆಶಾಯ 7:14 ಪ್ರಕಾರ ನೆರವೇರಿತು, ಅದು ಯೆಶಾಯನು ಅರಸನಾದ ಅಹಜ್ಜನಿಗೆ ಒಂದು ಗುರುತು ಎಂದು ಹೇಳಿದ ಪ್ರವಾದನೆ, ದೇವರ ಪ್ರವಾದನೆಯ ಒಂದು ಭಾಗ. "ಮರಿಯಳು" ಎಂಬ ಕನ್ಯೆಯಲ್ಲಿ ಯೇಸುವಿನ ಜನನ.

ಕೆಲವು ಸಾರಿ ಹಳೇ ಒಡಂಬಡಿಕೆಯ ಪ್ರವಾದನೆಗಳ ಅರ್ಥವನ್ನು ಹೊಸ ಒಡಂಬಡಿಕೆಯ ಬರಹಗಾರರು ಸ್ಪಷ್ಟ ಪಡಿಸಿರುವದಿಲ್ಲ. ಉದಾಹರಣೆ ಮತ್ತಾಯ 2:13-15ರಲ್ಲಿ ಮಗುವನ್ನು ಹೆರೋದನು ಕೊಲ್ಲಬಹುದೆಂಬ ಭಯದಿಂದ ಯೋಸೇಫನು ಐಗುಪ್ತಕ್ಕೆ ಓದನು, ನಂತರದಲ್ಲಿ ಅವನು ಪಾಲೇಸ್ತೆನಕ್ಕೆ ಹಿಂದಿರುಗಿದನು. ಇದು ದೇವರಿಂದ ಪ್ರವಾದಿಯು ಹೇಳಿದ ಮಾತು: ಐಗುಪ್ತದಿಂದ ನನ್ನ ಮಗನನ್ನು ಕರೆದನು. ಈ ವಚನವು ಹೊಶೆಯ 11:1 ರಲ್ಲಿದೆ. ಅದು ವಿಮೋಚನೆಯ ಕುರಿತ ಹಿನ್ನೆಲೆಯದಾಗಿರುತ್ತದೆ. ದೇವರು ತನ್ನ ಜನರನ್ನು ಐಗುಪ್ತದ ದಾಸತ್ವದಿಂದ ಬಿಡಿಸಿದ ವಿಚಾರವಾಗಿದೆ. ಆದಾಗ್ಯೂ ದೇವರು ತನ್ನ ಮಹತ್ವದ ಮಗನನ್ನು ಐಗುಪ್ತದಿಂದ ಕರೆದ ವಿಚಾರವೂ ಆಗಿದೆ.

ನಾವುಗಳು ಹೊಸ ಒಡಂಬಡಿಕೆಯ ನೆರವೇರಿಕೆಗಳನ್ನು ನೋಡುವಾಗ, ದೇವರ ವಾಕ್ಯಗಳು ಅನೇಕ ಅರ್ಥಗಳನ್ನು ನೀಡಿ, ಯೇಸು ಯಾರು ಎಂದು ತಿಳಿಸುತ್ತವೆ.